ವರಮಾನ ಕಡಿಮೆಯಾಗಿವೆ ಎನ್ನುವಂಥ ತರ್ಕ ಸರಿಯಲ್ಲ. ಅದಕ್ಕೆ ನಾನು ಹೇಳಿದ್ದು ಇನ್‌ಫ್ಲೋ ಆಫ್ ಗೂಡ್ಸ್‌ನ ಮೇಲೆ ಅವಲಂಬಿಸಿರುತ್ತದೆ ಎಂದು.

Sri K. PUTTASWAMY.—I would like to know from the Government whether they admit that the recent trend of collection of octroi is always on the increase because of the rise in prices ?

Sri D. K. NAIKAR.—From the statement which I have supplied, it may be seen that there is increase in octroi.

Sri MALLIKARJUNA KHARGE.—In view of the decrease in collection of octroi on account of Administrators Rule, will the Government consider holding of elections in these Municipalities so that octroi can be collected properly by the elected bodies ?

Sri D. K. NAIKAR. -We are not losing octroi on account of Adiministrators. We have already issued instructions for holding elections in these municipalities.

FORMATION OF QUARRYING CORPORATION

264. Sri K. R. SRINIVASULU NAYUDU (Shanthinagar).—

Will the Minister for Industries and Parliamentary Affairs be pleased to state :—

(*a*) whether Government contemplate the formation of quarrying Corporation ;

(*b*) if so, the steps taken to form such Corporation at an early date in view of abundant natural wealth of quarries in the State ?

Sri S. M. KRISHNA (Minister for Industries and Parliamentary Affairs).—

(*a*) No.

(*b*) Does not arise.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ನನ್ನ ಮೊದಲನೇ ಪ್ರಶ್ನೆಗೆ ಇಲ್ಲ ಎಂದು ಹೇಳಿದ್ದೀರಿ. ನನಗೆ ಗೊತ್ತಿರುವಂತೆ ರಾಜ್ಯದ ಅನೇಕ ಭಾಗಗಳಲ್ಲಿ ಕಲ್ಲಿನ ಬಂಡೆಗಳು ವಿಶೇಷವಾಗಿ ಇವೆ. ಮತ್ತು ಈಗ ಕಟ್ಟಡ ಕಟ್ಟಲು ಇಟ್ಟಿಗೆ ಅಭಾವ ಸಹ ಬಂದಿದೆ. ಏಕೆಂದರೆ ಮುರ ಸಿಗದೆ ಯಾರೂ ಈಗ ಇಟ್ಟಿಗೆ ಗೂಡನ್ನು ಇಡುತ್ತಿಲ್ಲ. ಈ ವಿಚಾರ ತಮಗೆ ಗೊತ್ತಿಲ್ಲವೇ ?

† ಶ್ರೀ ಎಸ್. ಎಂ. ಕೃಷ್ಣ.—ಗೊತ್ತಿಲ್ಲ.

ಶ್ರೀ ಕೆ. ಆರ್. ಶ್ರೀನಿವಾಸುಲುನಾಯ್ಡು—ಈಗ ಕಲ್ಲುಬಂಡೆಗಳನ್ನು ಹೊಡೆಯಲು ಖಾಸಗೀ ವ್ಯಕ್ತಿಗಳಿಗೆ ಮತ್ತು ಸಂಸ್ಥೆಗಳಿಗೆ ಲೈಸನ್ಸ್ ಕೊಡಲಾಗುತ್ತಿದೆ. ಅದರಿಂದ ಸರ್ಕಾರಕ್ಕೆ ಬರುತ್ತಿರುವ ರಾಯಲ್ಟಿ ಬಹಳ ಕಡಿಮೆಯಲ್ಲವೇ ? ಇದನ್ನು ಹೆಚ್ಚು ಮಾಡಲು ಮತ್ತು ಈಗಿರುವ ಲೋಪದೋಷಗಳನ್ನು ತೆಗೆಯುವುದಕ್ಕೆ ಏನಾದರು ಏರ್ಪಾಡು ಮಾಡಿದ್ದೀರಾ ?

ಶ್ರೀ ಎಸ್. ಎಂ. ಕೃಷ್ಣ.—ಈಗ ಲೋಕೋಪಯೋಗಿ ಇಲಾಖೆಯ ಸೀಮಿತಕ್ಕೆ ಒಳಪಟ್ಟಿರುವ ಕ್ವಾರಿಗಳನ್ನು ಬಿಟ್ಟು ಬೇರೆ ಕ್ವಾರಿಗಳಲ್ಲಿ ಕಲ್ಲನ್ನು ತೆಗೆಯಲು ಲೀಸ್‌ಗೆ ಕೊಡಲಾಗಿದೆ. ಅದರಂತೆ ಬೆಂಗಳೂರು ಡಿವಿಜನ್‌ನಲ್ಲಿ 322, ಬಳ್ಳಾರಿ ಡಿವಿಜನ್‌ನಲ್ಲಿ 69, ಗುಲ್ಬರ್ಗದ ಡಿವಿಜನ್‌ನಲ್ಲಿ 130, ಬೆಳಗಾಂ ಡಿವಿಜನ್‌ನಲ್ಲಿ 96, ದಕ್ಷಿಣ ಕನ್ನಡ ಜಿಲ್ಲೆಯ ಡಿವಿಜನ್‌ನಲ್ಲಿ 32 ಕಡೆಗಳಲ್ಲಿ ಕಲ್ಲನ್ನು ತೆಗೆಯಲು ಲೀಸ್‌ಗೆ ಕೊಡಲಾಗಿದೆ. ಇದರಿಂದ ಸರ್ಕಾರಕ್ಕೆ 9 ಲಕ್ಷದ 25 ಸಾವಿರ ರೂಪಾಯಿಗಳ ರಾಯಲ್ಟಿ ಬರುತ್ತಿದೆ. ಇದನ್ನು ಹೆಚ್ಚು ಮಾಡುವುದಕ್ಕೆ ಸರ್ಕಾರದವರು ಸತತವಾಗಿ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ದೇಶದಾದ್ಯಂತ ಅನೇಕ ಕಡೆಗಳಲ್ಲಿ ಕಲ್ಲು ಬಂಡೆಗಳಿವೆ. ಆದರೆ ಅದರಿಂದ ಸರ್ಕಾರಕ್ಕೆ ಬರುತ್ತಿರುವ ಆದಾಯ ಕೇವಲ 9 ಲಕ್ಷ ರೂಪಾಯಿಗಳು. ಇದನ್ನು ಹೆಚ್ಚು ಮಾಡುವ ಉದ್ದೇಶದಿಂದ ಮತ್ತು ಕಲ್ಲುಗಳನ್ನು ಹೆಚ್ಚು ಹೆಚ್ಚಾಗಿ ಹೊಡೆಸಲು ಬೇಕಾಗುವ ಯಂತ್ರಗಳನ್ನು ಕೊಳ್ಳುವ ಉದ್ದೇಶದಿಂದ ಇದಕ್ಕೆ ಸಂಬಂಧಪಟ್ಟಂತೆ ಒಂದು ಕಾರ್ಪೊರೇಷನ್ ಸ್ಥಾಪನೆ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ರಾಯಲ್ಟಿಯನ್ನು ಹೆಚ್ಚು ಪಡೆಯಬೇಕೆಂಬುದೇ ಸರ್ಕಾರದ ಉದ್ದೇಶ. ಆದರೆ ಅದಕ್ಕಾಗಿ ಒಂದು ಕಾರ್ಪೊರೇಷನ್‌ನನ್ನು ಮಾಡುವುದರಿಂದ ಅದು ಫಲಿಸುತ್ತದೆ ಎಂಬ ಬಗ್ಗೆ ಸಾಕಷ್ಟು ಅನುಮಾನ ಸರ್ಕಾರಕ್ಕೆ ಇದೆ.

BUILDING TO HOUSE MUNSIFF AND JMFC COURT AT YELLAPUR.

9. Sri V. M. GHADI (Haliyal).—

Will the Minister for Community Development and Social Welfare be pleased to state:—

(*a*) whether it is a fact that the T.D.B. Yellapur had resolved unanimously in the year 1971 and 1972 that the Board would provide their own building rent free for one year to house the Munsiff and JMFC Court at Yellapur;

(*b*) whether the resolution passed by the Board had to be approved by the Deputy Commissioner;

(*c*) if so, whether the above resolution has been approved by the Deputy Commissioner;

(*d*) if so, whether it has come to the notice of Government that the Deputy Commissioner has demanded to deposit one year's rent when the District Judge had come to inspect and approved the said building for locating the Court;

(*e*) whether it has come to the notice of Government that the said amount has been credited;

(*f*) if so, the reasons why the Deputy Commissioner has objected to the location of the Court?